ಒಂದೇ ರೀತಿಯಲ್ಲಿ ಹೇಳುತ್ತಿದ್ದರೆ ಅದು ಹೆಚ್ಚಿನ ಪರಿಣಾಮ ಬೀರುವುದಿಲ್ಲ. ದೃಶ್ಯದಲ್ಲಿ ಹೇಳಿದ್ದನ್ನೇ ಸಂಗೀತದಲ್ಲಿಯೂ ಹೇಳುವುದಾದರೆ ಸಂಗೀತ ಯಾಕೆ ಬೇಕು ಅಲ್ಲವೇ? ನೀವು ನಿಮ್ಮ ಮಾಧ್ಯಮವನ್ನು ಸರಿಯಾಗಿ ಬಳಸಿಕೊಳ್ಳುತ್ತಿಲ್ಲ ಎಂದು ಅರ್ಥ. ಹಾಗಾಗಿ ನಾನು ಮೊದಲು ಆ ಸನ್ನಿವೇಶವನ್ನು ಕಲ್ಪಿಸಿಕೊಳ್ಳುತ್ತೇನೆ. ಅಲ್ಲಿ ನಡೆಯುವ ಘಟನೆಗಳ ವಿವರಗಳು ದೃಶ್ಯರೂಪದಲ್ಲಿ ಕಾಣುತ್ತಿರುತ್ತವೆ. ಆದರೆ ಆ ದೃಶ್ಯಗಳು ಏನನ್ನು ಹೇಳಲಿಕ್ಕೆ ಸಾಧ್ಯವಿಲ್ಲವೋ ಅದನ್ನು ಸಂಗೀತ ಹೇಳಬೇಕು. ಅದು ನನ್ನ ಸಂಗೀತ ಮಾಧ್ಯಮದ ಸೃಜನಶೀಲ ಸಾಧ್ಯತೆ.

ಹೀಗೆ ಕಥೆ, ಸನ್ನಿವೇಶ, ನಿರ್ದೇಶಕರ ನಿರೀಕ್ಷೆ ಈ ಎಲ್ಲವೂ ತಿಳಿದುಕೊಂಡ ಮೇಲೂ ಒಂದು ಟ್ಯೂನ್ ಮೆಕ್ಯಾನಿಕಲ್ ಆಗಿ ಹುಟ್ಟಿಬಿಡುವುದಿಲ್ಲ. ಅದಕ್ಕೆ ಮತ್ತೇನೋ ಬೇಕು. ನನಗೆ ಸಾಮಾನ್ಯವಾಗಿ ಟ್ಯೂನ್‌ಗಳು ಹೊಳೆಯುವುದು ಬೈಕ್ ಓಡಿಸುತ್ತಿರುವಾಗ; ಕ್ಯಾಬ್‌ನಲ್ಲಿ ಪ್ರಯಾಣಿಸುವಾಗ. ನಾನು ಬೈಕ್ ಓಡಿಸುವಾಗ ಹಾಡಿಕೊಂಡೇ ಹೋಗುವುದು. ದಾರಿ ಮಧ್ಯ ಒಂದು ಚೆನ್ನಾಗಿರುವ ಟ್ಯೂನ್ ಸಿಕ್ಕುತ್ತದೆ; ಆದರೆ ಮನೆಗೆ ಬರುವಷ್ಟರಲ್ಲಿ ಅದು ಮರೆತುಹೋಗಿಬಿಡುತ್ತದೆ. ಹಾಗಾಗಿ ಈಗ ನನಗೆ ಬೈಕ್ ಓಡಿಸುವಾಗ ಟ್ಯೂನ್ ನೆನಪಾದರೆ ತಕ್ಷಣವೇ ಬೈಕ್ ನಿಲ್ಲಿಸಿ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡುಬಿಡುತ್ತೇನೆ. 'ನಾತಿಚರಾಮಿ' ಸಿನಿಮಾದ 'ವಸುಂಧರೆ...' ಹಾಡಿನ ಟ್ಯೂನ್ ಹೊಳೆದಿದ್ದೆಲ್ಲ ಹೀಗೆ ರಸ್ತೆ ಮಧ್ಯವೇ. 'ಅರವಿ' ಸಿನಿಮಾದ ಟ್ಯೂನ್ ಕೂಡ ಮನೆಯಿಂದ ಸ್ಟುಡಿಯೋಗೆ ಹೋಗುವ ದಾರಿಯಲ್ಲಿಯೇ ಹೊಳೆದಿದ್ದು. ಇನ್ನು ಕೆಲವು ಸಲ ಬ್ಯಾಂಜೋ ಹಿಡಿದುಕೊಂಡು ಸುಮ್ಮನೆ ಬಡಿಯುತ್ತಿರುತ್ತೇನೆ. ಆಗ ಏನೋ ಹೊಳೆಯುತ್ತದೆ. ಆಗ ನನ್ನ ಧ್ವನಿಯಲ್ಲಿಯೇ ಅದನ್ನು ರೆಕಾರ್ಡ್ ಮಾಡಿ, ಕೆಲವು ಸಲ ಬೇಸಿಕ್ ಇನ್‌ಸ್ಟ್ರುಮೆಂಟ್ಸ್ ಹಾಕಿ ನಿರ್ದೇಶಕರಿಗೆ ಕಳುಹಿಸಿಕೊಡುತ್ತೇನೆ. ಅವರ ಜತೆ ಚರ್ಚಿಸಿ ಬದಲಾಯಿಸಬೇಕಾ ಎಂದು ಚರ್ಚಿಸುತ್ತೇನೆ. ನಿರ್ದೇಶಕರ ಫೀಡ್‌ಬ್ಯಾಕ್ ಸ್ಪಷ್ಟವಾಗಿರಬೇಕು.

ಕೆಲವು ಸಲ ನಿರ್ದೇಶಕರು ಒಂದು ರೆಫರೆನ್ಸ್ ಕೊಟ್ಟು, ಇಂಥ ಹಾಡು ಮಾಡಿಕೊಡಿ ಎಂದು ಕೇಳುತ್ತಾರೆ. ಸ್ವಲ್ಪ ದಿನ ಬಿಟ್ಟು ಮತ್ತೊಂದು ರೆಫರೆನ್ಸ್ ಕೊಟ್ಟು ಹೀಗೆ ಮಾಡೋಣ ಅನ್ನುತ್ತಾರೆ. ಹೀಗೆ ನಿರ್ದೇಶಕರು ನಿಶ್ಚಿತವಾಗಿರದಿದ್ದರೆ ತುಂಬ ತೊಂದರೆ. ಸಮಯ, ಚೈತನ್ಯ ಎಲ್ಲವೂ ವ್ಯರ್ಥವಾಗುತ್ತದೆ.

ಚರ್ಚೆಯ ಹಂತದಲ್ಲಿ ಮಾತ್ರ ನಾನು ನಿರ್ದೇಶಕರ ಜೊತೆ ಕುಳಿತುಕೊಳ್ಳುತ್ತೇನೆ. ನಂತರ 'ನನ್ನನ್ನು ನನ್ನ ಪಾಡಿಗೆ ಬಿಟ್ಟುಬಿಡಿ, ಕೆಲಸವಾದ ಕೂಡಲೇ ನಿಮಗೆ ಹೇಳುತ್ತೇನೆ' ಎಂದು ಹೇಳಿಬಿಡುತ್ತೇನೆ. ಯಾಕೆಂದರೆ ಕಂಪ್ಯೂಟರ್ ಮುಂದೆ ಕೂತುಕೊಂಡು ಎದುರಿಗೆ ನಿರ್ದೇಶಕರನ್ನಿಟ್ಟುಕೊಂಡು ಟ್ಯೂನ್ ಹಾಕಿಕೊಡಲು ನನ್ನಿಂದ ಸಾಧ್ಯವಿಲ್ಲ. ಟ್ಯೂನ್ ಯಾವಾಗ ಹುಟ್ಟುತ್ತದೆ ಎಂದು ನನಗೂ ಗೊತ್ತಿರುವುದಿಲ್ಲ. ತುಂಬ ಜನ 'ನಾನು ನಿಮ್ಮ ಸ್ಟುಡಿಯೋಗೆ ಬರಲಾ? ಅಲ್ಲಿ ಕೂತು ಟ್ಯೂನ್ ಮಾಡೋಣವಾ?' ಎಂದು ಕೇಳುವುದುಂಟು. ಆದರೆ ನನ್ನದೇ ಸ್ಟುಡಿಯೊ ಇಲ್ಲ. ಹಾಗೆ ಕೂತು ಟ್ಯೂನ್ ಮಾಡುವುದೂ ನನ್ನಿಂದ ಸಾಧ್ಯವಿಲ್ಲ. ನನ್ನ ಶೈಲಿ ಅವರಿಗೆ ಒಪ್ಪಿಗೆ ಆದರೆ ಮಾತ್ರ ನಾನು ಕೆಲಸ ಮಾಡುತ್ತೇನೆ. ಅದು ಅವರಿಗೆ ಹೊಂದಿಕೆ ಆಗುತ್ತಿಲ್ಲ ಎಂದರೆ ಆ ಪ್ರಾಜೆಕ್ಟ್ ಬಿಟ್ಟುಬಿಡುತ್ತೇನೆ.

ಕನ್ನಡದಲ್ಲಿ ಸಾಹಿತ್ಯಜ್ಞಾನ ಅಷ್ಟಾಗಿ ಇಲ್ಲದಿರುವುದೂ ನನಗೊಂದು ಸವಾಲು. ತಮಿಳು ಭಾಷೆಯಾದರೆ ಟ್ಯೂನ್‌ಗೆ ಸಾಹಿತ್ಯ ಬರೆಯುವಾಗ 'ಒಂದು ಶಬ್ದ ಮೀಟರ್‌ಗೆ ಹೊಂದುತ್ತಿಲ್ಲ, ಅದರ ಬದಲು ಈ ಶಬ್ದವನ್ನು ಬಳಸಿಕೊಳ್ಳಬಹುದಾ?' ಎಂದು ನಾನು ಕೇಳಬಹುದು. ಆದರೆ ಕನ್ನಡದಲ್ಲಿ ನನಗೆ ಶಬ್ದಭಂಡಾರದ ಹೆಚ್ಚು ಪರಿಚಯ ಇಲ್ಲ.

ಸಿನಿಮಾ ಸಂಗೀತವನ್ನು ನಾನು ನನಗೋಸ್ಕರ ಮಾಡುತ್ತಿರುವುದಿಲ್ಲ. ಜಗತ್ತಿನ ಎಲ್ಲರನ್ನೂ